ಸೇರಿದಾಗ ನನಗೆ 29 ವರ್ಷ. ಆ ವಯಸ್ಸಿನವರನ್ನು ಅಲ್ಲಿ ಸೇರಿಸಿಕೊಳ್ಳುತ್ತಿರಲಿಲ್ಲ. ಆದರೆ ನನ್ನನ್ನು ಯಾಕೆ ಸೇರಿಸಿಕೊಂಡರೋ ಗೊತ್ತಿಲ್ಲ. ಅಲ್ಲಿಗೆ ಹೋಗುವ ಮುಂಚೆಯೇ ಕೆ.ವಿ. ಸುಬ್ಬಣ್ಣ ಅವರ ಬಗ್ಗೆ ಗೊತ್ತಿತ್ತು. ಅವರು ಅಲ್ಲಿ ಗಾಂಧಿ ಬಗ್ಗೆ ಪಾಠ ಮಾಡುತ್ತಿದ್ದರು. ನೀನಾಸಂಗೆ ಹೋಗುವ ಮುನ್ನವೇ ಲಂಕೇಶರ 'ಕ್ರಾಂತಿ ಬಂತು ಕ್ರಾಂತಿ' ನಾಟಕ ನಿರ್ದೇಶಿಸಿದ್ದೆ. ಅದು ನನ್ನ ನಿರ್ದೇಶನದ ಮೊದಲ ನಾಟಕ.

ಅಲ್ಲಿಂದ ಬಂದ ಮೇಲೆ ಅಚ್ಯುತ, ಧರ್ಮೇಂದ್ರ ಸೇರಿದಂತೆ ಸಮಾನ ಮನಸ್ಕರೊಂದಿಗೆ ಸೇರಿ ತಿಪಟೂರಿನಲ್ಲಿ 'ಪ್ರೊಫೆಷನಲ್ ಥಿಯೇಟರ್ ಯುನಿಟ್' ಆರಂಭಿಸಿದೆವು. ಅದರ ಉದ್ದೇಶ ಪುಟ್ಟ ಪುಟ್ಟ ಪಠ್ಯಗಳನ್ನು ರಂಗಪ್ರಯೋಗಕ್ಕಿಳಿಸುವುದು. ಮಾಸ್ತಿ ಅವರ ಕತೆಯೊಂದನ್ನು ಈ ಪ್ರಯೋಗಕ್ಕೆ ಒಗ್ಗಿಸಿದೆವು. ರಾಜ್ಯದಲ್ಲಿಯೇ ಮೊದಲ ಬಾರಿಗೆ ಈ ಪ್ರಯೋಗಗಳು ಮಾದರಿ ಎನಿಸಿಕೊಂಡವು. ಆ ನಂತರ ಬೇರೆಯವರು ಈ ಮಾದರಿಗಳನ್ನು ಅನುಸರಿಸಿದರು.

◆ **ನಟನೆಯ ಕಡೆಗೆ ಯಾಕೆ ಹೋಗಲಿಲ್ಲ?**

ರಂಗಭೂಮಿಯಲ್ಲಿಯೇ ಕೆಲಸ ಮಾಡಬೇಕು ಅಂದುಕೊಂಡಿದ್ದೆ. ಅಲ್ಲಿಯೂ ನಟನೆಯನ್ನು ಹೆಚ್ಚು ಕಡಿಮೆ ಬಿಟ್ಟೇ ಬಿಟ್ಟಿದ್ದೆ. ನಟನೆಗೆ ಬೇರೆಯದ್ದೇ ಶಕ್ತಿ ಬೇಕು. ಸಾಹಿತ್ಯದ ಸಂಪರ್ಕ ಹೆಚ್ಚಿದ್ದ ಕಾರಣ ನಿರ್ದೇಶನಕ್ಕೆ ಬಂದೆ.

◆ **ನೀವು ಒಂದೆಡೆ ನೆಲೆ ನಿಂತಿದ್ದು ಕಡಿಮೆ...**

ಎಲ್ಲ ಕಡೆ ನಟನೆಯ ಕಾರ್ಯಾಗಾರಗಳಿಗೆ ಕರೆಯುತ್ತಿದ್ದರು. ಯಾವ ರೀತಿ ಕಾರ್ಯಾಗಾರಗಳನ್ನು ನಡೆಸಬೇಕು ಎನ್ನುವುದರ ಬಗ್ಗೆ ನನ್ನದೇ ಆದ ವಿಧಾನವನ್ನು ಅನುಸರಿಸುತ್ತಿದ್ದೆ. ಒಂದೇ ಕಡೆ ಇರುವುದಕ್ಕೆ ಮನಸ್ಸು ಒಪ್ಪುವುದಿಲ್ಲ. ನನಗೆ ನನ್ನ ತಿರುಗಾಟದಿಂದ ದೊರೆತ ಅನುಭವ ಮಾತ್ರ ಅಗಾಧವಾಗಿದೆ. ಬೇರೆ ಬೇರೆ ಕಡೆಗಳಲ್ಲಿ ಪ್ರಯೋಗಗಳನ್ನು ಮಾಡಿದಾಗ ವಿಭಿನ್ನ ಅನುಭವ, ಹಿನ್ನೆಲೆ, ಸಮುದಾಯದ ಯುವಜನರ ಪರಿಚಯ ಆಗುತ್ತದೆ. ಅವರ ಜತೆ ಕೆಲಸ ಮಾಡುವುದು ಸವಾಲು. ಸಿದ್ಧಮಾದರಿಯ ನಟರ ಜತೆ ಕೆಲಸ ಮಾಡುವುದಕ್ಕಿಂತ ಇಂತಹ ನಟರ ಜತೆ ಕೆಲಸ ಮಾಡಿದರೆ ನಾನು ಸಹ ಬೆಳೆಯುತ್ತೇನೆ.

